ಆಹಾರ ಧಾನ್ಯಗಳ ವಿತರಣೆ

201(303); ಶ್ರೀ ಮಲ್ಲಿಕಾರ್ಜುನ ಸಿದ್ದಾಮಪ್ಪ ಖೂಬಾ (ಬಸವ ಕಲ್ಯಾಣ)

ಅ) ರಾಜ್ಯ ಸರ್ಕಾರವು ಕಳೆದ ಒಂದು ವರ್ಷದ ಅವಧಿಯಲ್ಲಿ ಪಡಿತರ ಚೀಟಿದಾರರಿಗೆ ಸರಬರಾಜು ಮಾಡುವ ಸಲುವಾಗಿ ಯಾವ ಯಾವ ಆಹಾರಧಾನ್ಯಗಳನ್ನು ಎಷ್ಟು ಪ್ರಮಾಣದಲ್ಲಿ ಖರೀದಿ ಮಾಡಿದೆ ಹಾಗೂ ಸೀಮೆಎಣ್ಣೆ ಮತ್ತು ಇತರೆ ವಸ್ತುಗಳನ್ನು ಎಷ್ಟು ಪ್ರಮಾಣದಲ್ಲಿ ಖರೀದಿ ಮಾಡಿದೆ ಮತ್ತು ಇದಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು;

ಆ) ಇದೇ ಅವಧಿಯಲ್ಲಿ ಎಷ್ಟು ಪ್ರಮಾಣದಲ್ಲಿ ಆಹಾರಧಾನ್ಯಗಳು, ಎಣ್ಣೆ ಮತ್ತು ಇತರೆ ವಸ್ತುಗಳನ್ನು ಕಾರ್ಡುದಾರರಿಗೆ ಹಂಚಿಕೆ ಮಾಡಲಾಗಿದೆ ಮತ್ತು ಹಂಚಿಕೆ ಮಾಡದೇ ರದ್ದಾಗಿರುವ ಆಹಾರ ಪದಾರ್ಥಗಳ ಪ್ರಮಾಣವೆಷ್ಟು; ಇದಕ್ಕೆ ಕಾರಣಕರ್ತರು ಯಾರು, ಇವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು)

ಅ) ಪಡಿತರ ಚೀಟಿದಾರರಿಗೆ ಸರಬರಾಜು ಮಾಡುವ ಸಲುವಾಗಿ 2013–14ನೇ ಸಾಲಿನಲ್ಲಿ ಒಟ್ಟು **26,43,908.198 ಮೆ.ಟನ್** ಅಕ್ಕಿ, **4,16,433.223 ಮೆ.ಟನ್** ಗೋಧಿ ಮತ್ತು **2460.000 ಮೆ.ಟನ್** ರಾಗಿಯನ್ನು ಖರೀದಿ ಮಾಡಲಾಗಿದೆ ಹಾಗೂ ಏಪ್ರಿಲ್–2013 ರಿಂದ ಜೂನ್–2014 ರವರೆಗೆ ಕೇಂದ್ರದಿಂದ 6,55,384 ಕೆ.ಎಲ್. ಸೀಮೆಎಣ್ಣೆಯನ್ನು ಖರೀದಿಸಲಾಗಿದೆ ಹಾಗೂ ಏಪ್ರಿಲ್ 2013 ರಿಂದ ಜುಲೈ 2014ರ ವರೆಗೆ ಒಟ್ಟು 1,53,824.392 ಮೆ.ಟನ್ ಸಕ್ಕರೆಯನ್ನು ಖರೀದಿಸಲಾಗಿದೆ.

ಇದಕ್ಕಾಗಿ ` 3046.04 ಕೋಟಿ ವೆಚ್ಚ ಮಾಡಲಾಗಿದೆ.

ಆ) 2013–14ನೇ ಸಾಲಿನಲ್ಲಿ ಒಟ್ಟು 30,58,536.869 ಮೆ.ಟನ್. ಆಹಾರಧಾನ್ಯ, 5,24,656 ಕೆ.ಎಲ್. ಸೀಮೆಎಣ್ಣೆ ಮತ್ತು 1,01,679.900 ಮೆ.ಟನ್. ಸಕ್ಕರೆಯನ್ನು ಪಡಿತರ ಚೀಟಿದಾರರಿಗೆ ಹಂಚಿಕೆ ನೀಡಲಾಗಿದೆ.

ಹಂಚಿಕೆ ಮಾಡದೆ ಯಾವುದೇ ಆಹಾರ ಪದಾರ್ಥಗಳು ರದ್ದಾಗಿರುವುದಿಲ್ಲ.

ವಸತಿ ನಿಲಯಗಳು

202(143); ಶ್ರೀ ಮೋಹಿಯುದ್ದಿನ್ ಬಾವಾ ಬಿ.ಎ. (ಮಂಗಳೂರು ನಗರ ಉತ್ತರ)

ಅ) ಕಳೆದ ಎರಡು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು? ಮತ್ತು ಬಿಡುಗಡೆಯಾದ ಅನುದಾನದಿಂದ ಬಳಕೆಯಾಗಿರುವ ಹಣ ಎಷ್ಟು (ವಿವರ ನೀಡುವುದು)

ಆ) ಪ್ರಸಕ್ತ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಮೆಟ್ರಿಕ್ ನಂತರದ ವಸತಿ ನಿಲಯಗಳೆಷ್ಟು ಮತ್ತು ಅವುಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ಸಂಖ್ಯೆವಾರು ವಿವರ ನೀಡುವುದು);

ಇ) ಹಾಗಿದ್ದಲ್ಲಿ, ವಸತಿ ನಿಲಯಗಳ ಮೂಲಭೂತ ಸೌಕರ್ಯಗಳಿಗಾಗಿ ಸರ್ಕಾರ ಯಾವ ಯೋಜನೆಗಳನ್ನು ರೂಪಿಸಿಕೊಂಡಿದೆ (ವಿವರ ನೀಡುವುದು)?